(c) if so, why this disparity between the Engineers and the Doctors ;

(d) whether Hon'ble Justice Narayana Pai has recommended in his Pay Commission report that both Engineers and Doctors are to be treated on par at the entry level of service ?

SRI M. VEERAPPA MOILY (Minister for Finance and Planning).—

(a) On first appointment as Health Officer-cum-Assistant Surgeons, Medical Graduates are appointed in the scale Rs. 900-1750. The posts in this scale are Class I posts.

(b) On first appointment as Assistant Engineers, Engineering Graduates are appointed in the scale Rs. 660-1300 *i. e.*, Class III posts.

(c) At entry level, the pay scales of Engineering Graduates and Medical Graduates were never on a par with each other.

(d) Yes.

PAPERS LAID ON THE TABLE

SRI M. VEERAPPA MOILY (Minister for Finance and Planning).—Sir, I beg to lay :

" The Report of the Comptroller and Auditor General of India for the year 1977-78 (Commercial) under Article 151 (2) of the Constitution of India "

MR. SPEAKER .— The Report is laid.

ಶ್ರೀಮಳ್ಳೂರು ಆನಂದರಾವ್ (ರಾಜಾಜಿ ನಗರ) .— ಮಾನ್ಯ ಅಧ್ಯಕ್ಷರೇ, ಇವತ್ತು ಒಂದು ಗಹನವಾದ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಅದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು. ಓಕಳಿಪುರಂ ಸ್ಮಶಾನದಲ್ಲಿ ಒಬ್ಬ ಸನ್ಯಾಸಿ ಹಾಗೂ ಇತರರು ಸೇರಿಕೊಂಡು ಮಕ್ಕಳ ರಕ್ತವನ್ನು ಕಾಳಿಗೆ ತರ್ಪಣ ಕೊಟ್ಟು ಆ ಸನ್ಯಾಸಿ ಒಂದು ಶಕ್ತಿಯನ್ನು ಆರಾಧಿಸುತ್ತಾ ಇದ್ದಾನೆಂದು ಹಾಗೂ ಇನ್ನೂ ಅನೇಕ ವಿವರಗಳು ಬಂದಿವೆ. ಅದನ್ನು ವಿವರವಾಗಿ ಪ್ರಸ್ತಾಪಮಾಡುವುದಕ್ಕೆ ನಾನು ಹೋಗುವುದಿಲ್ಲ ಆದರ ಬಗ್ಗೆ ಬೆಂಗಳೂರು ನಾಗರೀಕರು ಆಷ್ಟೇ ಅಲ್ಲ ಇಡೀ ರಾಜ್ಯದ ಜನರು ಬಹಳ ಗಾಬರಿಯಾಗಿದ್ದಾರೆ. ನನಗೆ ತಿಳಿದಿರುವ ಮಾಹಿತಿ ಪ್ರಕಾರ ಆ ಸಾಧುವನ್ನು ಮತ್ತು ಅವನ ಅನುಚರರನ್ನ ಪೋಲೀಸರು ಠಾಣೆಯಲ್ಲಿ ಚೆನ್ನಾಗಿ ಥಳಿಸಿದ್ದಾರೆಂದು. ಇತ್ತೀಚೆಗೆ ಬಂದಿರುವ ಸುದ್ದಿ ಪ್ರಕಾರ ಆ ಸಾಧು ಸತ್ತು ಹೋಗಿದ್ದಾನೆಂದು. ಈ ಸದನದ ಪ್ರಶ್ನೋತ್ತರ ಕಾಲದ ಅವಧಿ ಪ್ರಾರಂಭವಾದ ಮೇಲೆ ಈ ಸುದ್ದಿ ಬಂದಿದೆ. ಆದ್ದರಿಂದ ಈ ಘಟನೆ ಇನ್ನೂ ನಿಗೂಢವಾಯಿತು. ಈತ ಮೂರು ಮಕ್ಕಳ ರಕ್ತವನ್ನು ತರ್ಪಣ ಬಿಟ್ಟಿರುವ ಒಂದು ಪೋಟೋವನ್ನು ಸಹ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ದಯಮಾಡಿ ಒಂದು ಹೇಳಿಕೆ ಕೊಡಬೇಕಾಗುತ್ತದೆ, ಇದರಲ್ಲಿ ಯಾರದು ತಪ್ಪು ಎಂದು ಸರ್ಕಾರ ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ(ಹಣಕಾಸು ಸಚಿವರು). — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಮಳ್ಳೂರ್ ಆನಂದರಾಯರು ಶ್ರೀರಾಮಪುರದ ಸಾಧು ಸಂಬಂಧದಲ್ಲಿ ಏನು ಎಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅದನ್ನು ನಾವು ನೋಡುತ್ತೇವೆ. ಆದರೆ ಮಾನ್ಯ ಸದಸ್ಯರು ಈ ಬಗೆ ಏನಾದರೂ ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆಯೇ ಎಂಬುದನ್ನು ನೋಡಿ. ಅದರ ಬಗ್ಗೆ ವಿಚಾರಮಾಡಿ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.